**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

**ವಿಷಯ**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪದವಿ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಸಿ.ಎ.ಎಸ್. ಅಡಿಯಲ್ಲಿ ನಿಯಮಾವಳಿ ಪ್ರಕಾರ ವೃತ್ತಿ ಪದೋನ್ನತಿ ನೀಡದೆ ಇರುವುದರಿಂದ ಅಧ್ಯಾಪಕರ ಮನೋಸ್ಥೈರ್ಯ ಕುಸಿದಿರುವುದರಿಂದ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**<u>ಉತ್ತರ</u>**

**ಕಾಲೇಜು ಶಿಕ್ಷಣ ಇಲಾಖೆ**

- ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಯುಜಿಸಿ ವೇತನ ಶ್ರೇಣಿಗಳು ಮಂಜೂರಾತಿಯಾದ ನಂತರ ಯುಜಿಸಿ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಅರ್ಹರಿರುವ ಪ್ರಕರಣಗಳಲ್ಲಿ ಕಾಲಾನುಕಾಲಕ್ಕೆ ನಿಯಮಿತವಾಗಿ ವೃತ್ತಿ ಪದೋನ್ನತಿಯನ್ನು ಮಂಜೂರು ಮಾಡಲಾಗುತ್ತಿದೆ.
- ಕಳೆದ 2022-23ನೇ ಸಾಲಿನಿಂದ ಪ್ರಸ್ತುತ ದಿನಾಂಕದವರೆವಿಗೂ ಮಂಜೂರು ಮಾಡಲಾಗಿರುವ ವಿವಿಧ ಶೈಕ್ಷಣಿಕ ಹಂತದ ಪದೋನ್ನತಿ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಪದನಾಮ | 2022-23ನೇ ಸಾಲಿನಿಂದ ಇಲ್ಲಿಯವರೆಗೂ ಶೈಕ್ಷಣಿಕ ಹಂತದ ವಿವರ | | | | ಒಟ್ಟು |
|---|---|---|---|---|---|---|
| | | ಶೈಕ್ಷಣಿಕ ಹಂತ 11 | ಶೈಕ್ಷಣಿಕ ಹಂತ 12 | ಶೈಕ್ಷಣಿಕ ಹಂತ 13A | ಶೈಕ್ಷಣಿಕ ಹಂತ 14 | |
| ಸರ್ಕಾರಿ ಪ್ರಥಮ ದರ್ಜೆ ಕಾಲೇಜು | | | | | | |
| 1 | ಸಹ/ಸಹಾಯಕ ಪ್ರಾಧ್ಯಾಪಕರು | 195 | 464 | 361 | 297 | 1317 |
| 2 | ದೈಹಿಕ ಶಿಕ್ಷಣ ನಿರ್ದೇಶಕರು | 6 | 91 | 9 | 0 | 106 |
| 3 | ಗ್ರಂಥಪಾಲಕರು | 0 | 65 | 49 | 1 | 115 |
| | ಒಟ್ಟು | 201 | 620 | 419 | 298 | 1538 |

- ಯುಜಿಸಿ ಮಾರ್ಗಸೂಚಿ ಮತ್ತು ಸರ್ಕಾರದ ಆದೇಶದನ್ವಯ ಸ್ವೀಕೃತವಾಗುವ ಉನ್ನತ ಎಜಿಪಿ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸಂದರ್ಶನ ಏರ್ಪಡಿಸಿ ಪದೋನ್ನತಿ ನೀಡಲಾಗುತ್ತಿದೆ ಹಾಗೂ ನಿಯಮಾನುಸಾರ ಪ್ರಸ್ತಾವನೆ ಸಲ್ಲಿಸಿರುವ ಬೋಧಕರು ಈ ಸೌಲಭ್ಯವನ್ನು ಪಡೆದಿರುತ್ತಾರೆ.

**ತಾಂತ್ರಿಕ ಶಿಕ್ಷಣ ಇಲಾಖೆ**

- 2010 ಮತ್ತು 2012ರ ಎಐಸಿಟಿಇ ಅಧಿಸೂಚನೆಯಲ್ಲಿನ ಕೆಲವು ಸಮಸ್ಯೆ/ನಿಯಮಗಳಿಗೆ ದಿನಾಂಕ: 04/01/2016 ರಲ್ಲಿನ ಸ್ಪಷ್ಟೀಕರಣಗಳನ್ನು ಪ್ರಚುರಪಡಿಸಿದ್ದು, ಅದರಂತೆ ಬೋಧಕ ವರ್ಗದವರಿಗೆ ವೃತ್ತಿ ಪದೋನ್ನತಿ ನಿಯಮಾವಳಿಗಳನ್ನು ಪೂರ್ವಾನ್ವಯವಾಗಿ ಅಳವಡಿಸಿಕೊಂಡ ಸಂದರ್ಭದಲ್ಲಿ ಕೆಲವೊಂದು ಸಮಸ್ಯೆಗಳು ಉದ್ಭವಗೊಂಡ ಹಿನ್ನೆಲೆಯಲ್ಲಿ ಸದರಿ ವಿಷಯದ ಬಗ್ಗೆ ಸ್ಪಷ್ಟೀಕರಣ ಕೋರಿ ಎ.ಐ.ಸಿ.ಟಿ.ಇ ರರೊಂದಿಗೆ ಪತ್ರ ವ್ಯವಹರಿಸಲಾಗಿತ್ತು.

150ನೇ ಕಟ್ಟು
SL.No: 08
ಪ್ರ: 330

- ಅದರಂತೆ, ಎ.ಐ.ಸಿ.ಟಿ.ಇಯು ದಿನಾಂಕ:20.05.2020ರ ಅಧಿಸೂಚನೆಯಲ್ಲಿ ನೀಡಿರುವ "Clarifications on Certain Issues / Anomalies in 6th CPC pertaining to Qualifications, Pay Scales, Service Conditions, Career Advancement Schemes (CAS)/promotions etc. for Teachers and other Academic Staff of Technical Institutions (Degree/Diploma)" ಸ್ಪಷ್ಟೀಕರಣಗಳನ್ನು ಆಧರಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 20 ಡಿಟೆಇ 2018, ದಿ: 08.12.2020 ಹಾಗೂ ಇಡಿ 167 ಡಿಟೆಇ 2017, ದಿ: 10.11.2020ರಲ್ಲಿ, ಸರ್ಕಾರಿ/ಅನುದಾನಿತ ಇಂಜಿನೀಯರಿಂಗ್ ಹಾಗೂ ಪಾಲಿಟೆಕ್ನಿಕ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತಿ ಪದೋನ್ನತಿ ಸೌಲಭ್ಯಗಳನ್ನು ನೀಡಲು ದಿನಾಂಕ:08.11.2012 ರಲ್ಲಿನ ನಿಯಮಗಳಲ್ಲಿ ವಿಧಿಸಿರುವ ಎ.ಪಿ.ಐ ಆಧಾರಿತ ಅಂಕಗಳ ಪರಿಗಣನೆಯಿಂದ ದಿನಾಂಕ:07.11.2015 ರವರೆಗೆ ವಿನಾಯಿತಿ ನೀಡಿ ಕೆಲವು ನಿಬಂಧನೆಗೆ ಒಳಪಟ್ಟು ಮಂಜೂರಾತಿ ನೀಡಲಾಗಿರುತ್ತದೆ.
- ಮುಂದುವರೆದು, ಎ.ಐ.ಸಿ.ಟಿ.ಇ ಯು ದಿನಾಂಕ: 02.08.2022ರ ಪತ್ರದಲ್ಲಿ ಅಲ್ಪಾವಧಿ ತರಬೇತಿ, ಪತ್ರಿಕಾ ಪ್ರಕಟಣೆ ಮತ್ತು ಇತರೆ ವಿಷಯಗಳ ಕುರಿತು ಸ್ಪಷ್ಟೀಕರಿಸಲಾದ ಪ್ರಯುಕ್ತ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಅವಧಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.
- ಎ.ಐ.ಸಿ.ಟಿ.ಇಯು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ/ ನಿಯಮಾವಳಿ/ಆದೇಶ/ಸ್ಪಷ್ಟೀಕರಣಗಳನ್ನು ಅಳವಡಿಸಿಕೊಂಡು ದಿನಾಂಕ:07-11-2015 ರ ಪೂರ್ವಕ್ಕೆ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಅರ್ಹರಿರುವ 55 ಜನ ಬೋಧಕ ವರ್ಗದವರಿಗೆ ಹಾಗೂ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ದಿನಾಂಕ 07/11/2015 ರ ಪೂರ್ವಕ್ಕೆ ಅರ್ಹರಿರುವ 154 ಜನ ಬೋಧಕ ವರ್ಗದವರಿಗೆ ಹಾಗೂ 01.03.2019 ರ ಮುಂಚಿನ ಅವಧಿಗೆ ಅರ್ಹರಿರುವ 79 ಜನ ಬೋಧಕ ವರ್ಗದವರಿಗೆ ಸಿ.ಎ.ಎಸ್ ವೃತ್ತಿ ಪದೋನ್ನತಿಯನ್ನು ನೀಡಲು ಸ್ಥಾನಿಕರಣ ಸಮಿತಿಯ ಮುಂದೆ ಮಂಡಿಸಿ ವಿಷಯ ತಜ್ಞರ ಶಿಫಾರಸ್ಸಿನ ಮೇರೆಗೆ ಆಯುಕ್ತರು,ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಇಡಿ 154 ಡಿಸಿಇ 2023

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು